ದಿನಾಂಕಃ **16-05-2026** ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಮತ್ತು ಪಿರ್ಯಾದಿ ಬಾಲ್ಯದಿಂದ ಸ್ನೇಹಿತರು ಅಂದರೆ ಸರಿ. ನಾನು ಭಾಗ್ಯನಗರದ ಜ್ಞಾನಬಂದು ಪಿ ಯು ಕಾಲೇಜನಲ್ಲಿ ಶಿಕ್ಷಕನಾಗಿದ್ದೇನೆಂದರೆ ಸರಿ. ನಾನು 2005-06 ರಿಂದ ನಾನು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆಂದರೆ ಸರಿ. ಅದೇ ರೀತಿ ನನ್ನ ಸಹೋದರ ನೊಂದಿಗೆ ವ್ಯವಹಾರಸ್ಥನಾಗಿ ಕೊಪ್ಪಳದ ದುರ್ಗಮ್ಮ ದೇವಸ್ಥಾನದ ಹತ್ತಿರ ಎಲೆಕ್ಟ್ರಿಕ್ ಅಂಗಡಿ ಹೊಂದಿರುತೆತೇನೆ ಅಂದರೆ ಸರಿ. ನನ್ನ ಮನೆಯ ಜವಾಬ್ದಾರಿ ನಾನೇ ನೋಡಿಕೊಳ್ಳುತ್ತೇನೆಂದರೆ ಸರಿ. ನನ್ನ ಕುಟುಂಬ ಮತ್ತು ವ್ಯವಹಾರದ ಖರ್ಚನ್ನು ನಿಭಾಯಿಸಲು ನಾನು ಬೇರೆ ಬೇರೆ ವ್ಯಕ್ತಿಗಳಿಂದ ಸಾಲ ಪಡೆದಿದ್ದೇನೆಂದರೆ ಸರಿ. ದಿಃ 20-7-2018 ರಂದು ನಾನು ಪಿರ್ಯಾದಿಯ ಬಳಿ ನಾನು ಎರಡೂವರೆ ಲಕ್ಷ ಕೇಳಿದ್ದೆ ಅಂದರೆ ಸರಿ. ದಿಃ 21-07-2018 ರಂದು ಪಿರ್ಯಾದಿದಾರರು ನನಗೆ ರೂ. 50 ಸಾವಿರ ನಗದು ಹಾಗೂ ರೂ. 2 ಲಕ್ಷ ಚೆಕ್ಕ ಮೂಲಕ ನೀಡಿದ್ದಾರೆ ಅಂದರೆ ಸರಿಯಲ್ಲ ಪಿರ್ಯಾದಿ ನನಗೆ 2016 ರಲ್ಲಿ ನೆಫ್ಟ್ ಮುಖಾಂತರ ರೂ. 2 ಲಕ್ಷ ಹಣ ನೀಡಿದ್ದರು. ನಿಪಿ-1 ರಲ್ಲಿನ ಸಹಿ ನನ್ನದೇ ಆಗಿರುತ್ತದೆ ಆದರೆ ಬರವಣಿಗೆ ನನ್ನದಾಗಿರುವುದಿಲ್ಲ. ನಿಪಿ-8 ರ ಪ್ರಕಾರ ದಿಃ 21-7-2018 ರಂದು ಪಿರ್ಯಾದಿ ನನ್ನ ಖಾತೆಗೆ ರೂ. 2 ಲಕ್ಷ ವರ್ಗಾಯಿಸಿದ್ದಾರೆ ಅಂದರೆ ಸರಿ. ಅದೇ ದಿನನಾನು ಪಿರ್ಯಾದಿ ಬಳಿ ರೂ. 50 ನಗದು ಹಣ ಪಡೆದಿದ್ದು ಒಟ್ಟು ರೂ. 2,50,000/- ಮರುಪಾವತಿಗೆ ನಾನು ಪಿರ್ಯಾದಿಗೆ ನಿಪಿ-1 ರಂತೆ ಚೆಕ್ಕ ನೀಡಿದ್ದೇನೆಂದರೆ ಸರಿ. ಪಿರ್ಯಾದಿಯಿಂದ ಪಡೆದ ರೂ. 2,50,000/- ಹಣವನ್ನು ನಾನು ವಾಪಸ್ಸು ಮಾಡಿರುತ್ತೆನೆ ಆದರೆ ಆ ಬಗ್ಗೆ ನನ್ನಬಳಿ ದಾಖಲೆಗಳು ಇಲ್ಲ. ನಾನು ಪಿರ್ಯಾದಿಯಿಂದ ಪಡೆದ ರೂ. 2,50,000/- ಸಾಲವನ್ನು ಹಿಂತಿರುಗಿಸಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿ ನೀಡಿದ ನೋಟೀಸ ನನಗೆ ತಲುಪಿರುತ್ತದೆ ಅಂದರೆ ಸರಿ. ಸದರಿ ನೋಟೀಸಗೆ ನಾನು ಯಾವುದೇ ಉತ್ತರವನ್ನು ನೀಡಿಲ್ಲ ಅಂದರೆಸರಿ. ಪಿರ್ಯಾದಿಗೆ ನಾನು ಹಣ ಹಿಂತಿರುಗಿಸಿದ ಬಗ್ಗೆ ವಕೀಲರಿಗೆ ನಾನು ತಿಳಿಸಿದ್ದೇನೆ. ಪಿರ್ಯಾದಿಗೆ ಹಣವನ್ನು ಮರಳಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಬಳಿ ಸಾಕಷ್ಟು ಹಣ ಇದ್ದರೂ ಸಹ ಪಿರ್ಯಾದಿಗೆ ವಂಚಿಸುವ ಉದ್ದೇಶದಿಂದ ಒಂದು ಸುಳ್ಳು ಚೆಕ್ಕನ್ನು ಪಿರ್ಯಾದಿಗೆ ನೀಡಿದ್ದೇನೆಂದರೆ ಸರಿಯಲ್ಲ.

( ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.